ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ —(ಅ) ಪ್ರಶ್ನೆಗೆ ಉತ್ತರವಾಗಿ ಒಟ್ಟಾಗಿ ಕೊಂಡುಕೊಳ್ಳುವ ಸಂದರ್ಭದಲ್ಲಿ ಒಂದು ಲೀಟರಿಗೆ 3—17 ರೂಪಾಯಿಗಳು ಮತ್ತು 750 ಮಿಲಿಮೀಟರ್‌ನ ಶೀಶೆಯೊಂದಕ್ಕೆ 3—64 ರೂಪಾಯಿಗಳು ಎಂದು ಹೇಳಿದ್ದೀರಿ. ಅಂದರೆ ಒಬ್ಬರಿಗೆ ಎಷ್ಟು ಬೇಕಾದರೆ ಅಷ್ಟು ಸಪ್ಲೈ ಮಾಡುತ್ತೀರಾ ಹೇಗೆ ? ಕೆಲವು ವರ್ಷಗಳ ಹಿಂದೆ ಒಂದು ಕಂಪನಿಯವರು ಸರ್ಕಾರಕ್ಕೆ ಲಕ್ಷಾಂತರ ರೂಪಾಯಿಗಳನ್ನು ಮೋಸ ಮಾಡಿದ್ದು ಪತ್ರಿಕೆಗಳಲ್ಲಿ ಬಂದಿತ್ತು. ಅದನ್ನು ತನಿಖೆ ಮಾಡಿದಿರಾ, ಒಂದೇ ವರ್ಷ ಅವರು ಜಾಸ್ತಿ ಹಣ ಕಟ್ಟಿದ್ದು ನಿಜವೇ ?

ಶ್ರೀ ರಾಮಕೃಷ್ಣ ಹೆಗಡೆ.—ಕೋಟಾವನ್ನು ಯಾರು ಯಾರಿಗೆ ಎಷ್ಟೆಷ್ಟು ಕೊಡರಾಗಿದೆ ಎಂಬ ಬಗ್ಗೆ ಇಲ್ಲಿ ಪ್ರಶ್ನೆ ಇರುವುದು. ರೆಕ್ಟಿಫೈಡ್ ಸ್ಪಿರಿಟನ್ನು ಕೋಟಾ ಪ್ರಕಾರ ಕೊಡುವುದಿಲ್ಲ. ಮಂಡ್ಯದ ಬಟ್ಟಿ ಕಾರ್ಖಾನೆಯವರು ಎಷ್ಟು ಉತ್ಪನ್ನ ಮಾಡುತ್ತಾರೋ ಅದರ ಪ್ರಕಾರ ಸಪ್ಲೈ ಮಾಡುತ್ತೇವೆ. ಯಾವುದೋ ಕಂಪನಿಯವರು ಸರ್ಕಾರಕ್ಕೆ ಹಣ ಕೊಡದ ಬಗ್ಗೆ ಪತ್ರಿಕೆಗಳಲ್ಲಿ ಬಂದ ವಿಚಾರ ನನಗೆ ಗೊತ್ತಿಲ್ಲ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಈ ಕಾರ್ಖಾನೆಯಲ್ಲಿ ತಯಾರಾದ ಉತ್ಪನ್ನಗಳನ್ನು ಹೋದ ವರ್ಷ ಯಾರು ಯಾರಿಗೆ ಯಾವಯಾವ ಪ್ರಮಾಣದಲ್ಲಿ ಕೊಟ್ಟಿದ್ದೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ಆ ಬಗ್ಗೆ ಬೇರೆ ಪ್ರಶ್ನೆ ಹಾಕಿದರೆ ಉತ್ತರ ಕೊಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ರೇಟನ್ನು ಚಾರ್ಜ್ ಮಾಡಿರುವುದು ಒಂದು ಲೀಟರಿಗೆ 3—17 ರೂಪಾಯಿಗಳು, 750 ಮಿಲಿಮೀಟರಿನ ಶೀಶೆಯೊಂದಕ್ಕೆ 3—64 ರೂಪಾಯಿಗಳು. ಎಷ್ಟು ಜಾಸ್ತಿ ಬೆಲೆಗೆ ಮಾರುವ ಬದಲು ಇನ್ನೂ ಕಡಿಮೆ ಬೆಲೆಗೆ ಮಾರಾಟ ಮಾಡಿದರೆ ತಮಗೆ ಇನ್ನೂ ಹೆಚ್ಚಿನ ಲಾಭ ಬರುವುದಿಲ್ಲವೇ ?

(ಉತ್ತರವಿಲ್ಲ).

Extension of S. D. North Canal in K. R. Pet Taluk

246. Sri M. K. BOMME GOWDA (K. R. Pet).—

Will the the Minister of State for Minor Irrigation be pleased to state :—

(*a*) when the work of extension of S. D. North Canal in Krishnarajpet Taluk was started;

(*b*) the reasons for not yet completing the same;

(*c*) the amount spent on this behalf ?

Smt. BASAVARAJESWARI (Deputy Minister for Social Wefare) [on behalf of SRI A. J. DODDAMETI (Minister of State for Minor Irrigation)].—

(*a*) In November, 1963.

(*b*) The work is now completed and water is being supplied.

(*c*) Rs. 49,336 to end of December 1968.

ಶ್ರೀ ಎಂ. ಕೆ. ಬೊಮ್ಮೇಗೌಡ.—(ಅ) ಪ್ರಶ್ನೆಗೆ ಉತ್ತರವಾಗಿ ಕಾಮಗಾರಿಯು ಈಗ ಪೂರ್ತಿಯಾಗಿದ್ದು ನೀರನ್ನು ಒದಗಿಸರಾಗುತ್ತಿದೆ ಎಂದು ಹೇಳಿದ್ದೀರಿ. ಆದರೆ ಅಲ್ಲಿ ನೀರನ್ನು ಒದಗಿಸುತ್ತಿಲ್ಲ. ಮತ್ತು ವ್ಯವಸಾಯವಾಗುತ್ತಿಲ್ಲ. ನಾಲಾ ಬಡಾವಣೆಯ ಒಂದು ಕಡೆ ದಡ ಕುಸಿದು ನೀರು ಬಂದ್ ಆಗಿದೆ. ಇದಕ್ಕೆ ಸರ್ಕಾರದವರು ಏನು ಹೇಳುತ್ತಾರೆ ?

ಶ್ರೀಮತಿ ಬಸವರಾಜೇಶ್ವರಿ.—ನಮ್ಮಲ್ಲಿ ಬಂದಿರುವ ವರದಿ ಪ್ರಕಾರ ಮಾರ್ಚ್ 69ನೇ ಇಸವಿಯಲ್ಲಿ 7/68ನೇ ಮೈಲಿವರೆಗೆ ನೀರು ಬಿಟ್ಟಿದ್ದಾರೆ ಎಂದು ಗೊತ್ತಾಗುತ್ತದೆ. ಇದು ಜೀರ್ ಎಂಡ್‌ನಲ್ಲಿ ಕೆಲಸ ನಡೆಯುತ್ತಿದೆ ಎಂದು ಸರಕಾರದ ಅಭಿಪ್ರಾಯ. ಮಾನ್ಯ ಸದಸ್ಯರು ಈಗ ಬೇರೆ ವಿಚಾರ ಹೇಳುತ್ತಿದ್ದಾರೆ. ಇದನ್ನು ಪರಿಶೀಲನೆ ಮಾಡಿ ಆದಷ್ಟು ತೀವ್ರವಾದ ಕಾರ್ಯ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಇದರ ಅಂದಾಜು ಎಷ್ಟು ?

ಶ್ರೀಮತಿ ಬಸವರಾಜೇಶ್ವರಿ.—ಮೊದಲು ಇದ್ದ ಅಂದಾಜು ಎಕರೆಗೆ 50 ಸಾವಿರ.

ಶ್ರೀ ಎಂ. ನಾಗಪ್ಪ.—ನೀರಾವರಿ ಯೋಜನೆಯ ಅಚ್ಚುಕಟ್ಟು ಎಷ್ಟು ?

ಶ್ರೀಮತಿ ಬಸವರಾಜೇಶ್ವರಿ.—ಇಲ್ಲಿ ಕೆನಾಲ್ ತೆಗೆದು ನೀರು ಕೊಟ್ಟರೆ ಸುಮಾರು 250 ಎಕರೆಗಳ ವರೆಗೆ ನೀರು ಸಿಗುತ್ತದೆ ಎಂದು ವರದಿ ಇದೆ.

ಶ್ರೀ ಎನ್. ಎ. ಚೆನ್ನೇಗೌಡ.—ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ ಇಲ್ಲಿ ನಾಲಾದಲ್ಲೇ ನೀರು ಬಿಡಲಾಗಿದೆ ಎಂದು ಹೇಳುತ್ತಾರೆ. ಆದರೆ ಅದೇ ಕ್ಷೇತ್ರದಿಂದ ಬಂದಿರುವ ಮಾನ್ಯ ಸದಸ್ಯರು ಇಲ್ಲ ನೀರೇ ಬಿಟ್ಟಿಲ್ಲ ಎಂದು ನೋಡಿ ಹೇಳುತ್ತಾರೆ. ಇದರಲ್ಲಿ ಯಾವುದು ಸತ್ಯಕ್ಕೆ ದೂರವಾದುದು ಎನ್ನುವುದನ್ನು ತಿಳಿಸುತ್ತಾರೆಯೇ ?

ಶ್ರೀಮತಿ ಬಸವರಾಜೇಶ್ವರಿ.—ನಾನು ಸರಕಾರದ ಅಭಿಪ್ರಾಯ ಹೇಳುತ್ತಿರುವುದು. 1969 ರಲ್ಲೇ 7/68 ಮೈಲಿವರೆಗೆ ನೀರು ಕೊಡಲಾಗಿದೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಶ್ರೀರಾಮದೇವರ ನಾಲ ಬಡಾವಣೆ ಕೃಷ್ಣರಾಜಪೇಟೆ ಯಲ್ಲಿ ನಡೆಯುತ್ತಿರುವ ಕೆಲಸದ ಬಗ್ಗೆ ಕೇಳುತ್ತಿದ್ದೇನೆ. ಇದರ ಬಡಾವಣೆಗಾಗಿ ಫೌಂಡೇಷನ್ ಸ್ಟೋನು ಹಾಕಿದುದು 1963 ರಲ್ಲಿ. ಇದರ ಅಂದಾಜು ಆಗಿ ಆದಂತೆ ನಾಲಾ ಮಾಡಿ ಇದಕ್ಕೆ ಸುಮಾರು 22 ಲಕ್ಷ ಖರ್ಚು ಮಾಡುವ ಎಸ್ಟಿಮೇಟು ಇತ್ತು. ಆದರೆ ಇಲ್ಲಿ 49-50 ಸಾವಿರ ಮಾತ್ರ ಖರ್ಚು ಮಾಡಿರುವ ನಾಲಾದ ಬಗ್ಗೆ ಹೇಳುತ್ತಿದ್ದಾರೆ. ಇದು ಒಂದಕ್ಕೊಂದು ಸರಿಯಾಗುವುದಿಲ್ಲ ಅಲ್ಲವೇ ?

ಶ್ರೀಮತಿ ಬಸವರಾಜೇಶ್ವರಿ.—ಶ್ರೀರಾಮದೇವರ ನಾಲಾದ ಬಗ್ಗೆನೇ ನಾನು ಇಲ್ಲ ಉತ್ತರ ಕೊಡುತ್ತಿರುವುದು. ನಿರ್ದಿಷ್ಟವಾಗಿ ಹೇಳಬೇಕೆಂದರೆ 7/64 ನೇ ಮೈಲಿಯಿಂದ 7/68 ಮೈಲಿವರೆಗೆ ಎಂದರೆ ಸುಮಾರು ನಾಲ್ಕು ಮೈಲಿವರೆಗೆ ನಾಲಾ ಮಾಡಲು 1961-62ನೇ ಸಾಲಿನಲ್ಲಿ 50 ಸಾವಿರ ರೂಪಾಯಿಗಳ ಅಂದಾಜು ಆಗಿತ್ತು. ಇದರ ಪೈಕಿ ಈಗಾಗಲೇ 49,336 ರೂಪಾಯಿಗಳನ್ನು ಖರ್ಚು ಮಾಡಲಾಗಿದೆ.

Sri S. SIVAPPA.—As I know the estimate of that work is about 20 or 25 lakhs. The work is not yet complete. Water is not let out. The Hon. Minister is giving information regarding some other project, not relevent to this question. It is wrong information that the Hon. Minister is giving.

ಶ್ರೀಮತಿ ಬಸವರಾಜೇಶ್ವರಿ.—ಇದರಲ್ಲೇನೂ ತಪ್ಪು ಅಭಿಪ್ರಾಯವಿಲ್ಲ. ನಾನು ಇಲ್ಲ ಕೊಟ್ಟಿರುವ ಉತ್ತರದ ಬಗ್ಗೆ ಎಂದರೆ ಎಸ್. ಡಿ. ಕೆನಾಲ್ ಬಗ್ಗೆ ಹೇಳುತ್ತಿರುವುದು ಇದನ್ನು ಕೃಷ್ಣರಾಜ ಪೇಟೆಯಿಂದ ಮುಂದುವರಿಸುತ್ತಿದ್ದಾರೆ.

Mr. SPEAKER.—I shall find out where the mistake lies.

Sri S. SIVAPPA.—I request the Chair to call for the file and satisfy itself about it.

Sri AZEEZ SAIT.—This question may be withheld for the time being Sir.

Mr. SPEAKER.—I shall go into the records and find out where the mistake lies. Now Question hour is over.